# ಸ್ಟೈಲಿಷ್ ಬೆಲ್ಟ್ ಉಡುಪು



**ಆಧುನಿಕ ಮನೋಭಾವದ ಮಹಿಳೆಯರಿಗಾಗಿ ಶರ್ಟ್–ಬೆಲ್ಟ್ ಡ್ರೆಸ್ ಬಂದಿದೆ. ನಿತ್ಯ ಕಾಲೇಜು, ಕಚೇರಿಗಳಿಗೆ ಹೋಗುವ ಹೆಣ್ಣುಮಕ್ಕಳು ಆರಾಮವಾಗಿ ಧರಿಸುವಂಥ ಇಂಥ ಉಡುಗೆ ಫ್ಯಾಷನ್ ಟ್ರೆಂಡ್ ಎನಿಸಿದೆ.**

**■ ಕವಿತಾ ವಿನು ಭಟ್ಟ**

ಫ್ಯಾಷನ್ ಲೋಕದಲ್ಲಿ ದಿನನಿತ್ಯ ಬದಲಾವಣೆಯ ಗಾಳಿ ಬೀಸುತ್ತಲೇ ಇರುತ್ತದೆ. ಫ್ಯಾಷನ್ ವಿನ್ಯಾಸಗಾರರ ಸೃಜನಶೀಲತೆಯಿಂದ ತಯಾರಾಗಿರುವ ಶರ್ಟ್–ಬೆಲ್ಟ್ ಡ್ರೆಸ್‌ಗಳೀಗ ಫ್ಯಾಷನ್‌ಪ್ರಿಯರಿಗೆ ಸ್ಟೈಲಿಷ್ ಲುಕ್ ನೀಡಲು ಸಹಕಾರಿಯಾಗಿವೆ. ಮೆನ್ಸ್‌ವೇರ್ ಎಂದು ಕರೆಯಲ್ಪಡುತ್ತಿದ್ದ ಫಾರ್ಮಲ್ ಶರ್ಟ್, ಟೀ ಶರ್ಟ್, ಜೀನ್ಸ್‌ಗಳೀಗ ಹುಡುಗರಿಗೆ ಮಾತ್ರ ಸೀಮಿತವಾಗಿಲ್ಲ. ಫಾರ್ಮಲ್ ಶರ್ಟ್‌ಗಳಿಗೆ ಫ್ಯಾಷನ್ ಟಚ್ ಕೊಟ್ಟು ಬೆಲ್ಟ್ ಡ್ರೆಸ್, ಶರ್ಟ್ ಡ್ರೆಸ್‌ಗಳೆಂಬ ಹೆಸರಿನಲ್ಲಿ ಮಾರುಕಟ್ಟೆಗೆ ಪರಿಚಯಿಸಲಾಗಿದ್ದು, ಆಧುನಿಕ ಮನೋಭಾವದ ಮಹಿಳೆಯರ ಹಾಟ್ ಫೆವರೇಟ್ ಎನಿಸಿದೆ.

ಪ್ಯಾಂಟ್‌ಗಳಿಗೆ ಧರಿಸುತ್ತಿದ್ದ ಬೆಲ್ಟ್‌ಗಳೀಗ ಡ್ರೆಸ್‌ಗಳಿಗೆ ಸೇರಿಕೊಂಡು ಆಧುನಿಕ ಲುಕ್‌ನಲ್ಲಿ ಮಾರುಕಟ್ಟೆಗೆ ಬಂದಿದೆ. ನವನವೀನ ವಿನ್ಯಾಸದ ಬೆಲ್ಟ್ ಡ್ರೆಸ್‌ಗಳು ಮೆಟ್ರೋ ಸಿಟಿಯ ಹುಡುಗಿಯರಿಗೆ ಹಾಟ್ ಫೇವರೆಟ್ ಆಗಿವೆ. ಆಫೀಸ್, ಮೀಟಿಂಗ್, ಔಟಿಂಗ್, ಗೆಟ್ ಟುಗೆದರ್‌ಗಳಲ್ಲಿ ಬ್ಯುಸಿಯಾಗಿರುವ ಕಾರ್ಪೊರೇಟ್ ಕ್ಷೇತ್ರದ ಮಹಿಳೆಯರಿಗೆ ವಿಭಿನ್ನ ನೋಟ ಕೊಡುವಲ್ಲಿ ಯಶಸ್ವಿಯಾಗಿದೆ.

ವೈವಿಧ್ಯಮಯ ವಿನ್ಯಾಸ ಮತ್ತು ಮಾದರಿಗಳಲ್ಲಿ ಲಭ್ಯವಿರುವ ಇಂಥ ಉಡುಪು ಮಹಿಳೆಯರ ಆಯ್ಕೆಗೆ ತಕ್ಕಂತೆ ರೂಪುಗೊಂಡಿರುತ್ತದೆ. ನಿಮ್ಮಿಷ್ಟದ ಬಣ್ಣ ವೈವಿಧ್ಯಗಳಿದ್ದು ದೇಹದ ಅಳತೆಗೆ ತಕ್ಕಂತೆಯೇ ಇರುವುದರಿಂದ 'ಫಿಟ್ ಆ್ಯಂಡ್ ಫೈನ್' ಆಗಿದೆ. ಕಾಂಟ್ರಾಸ್ಟ್ ಶೇಡ್‌ನ ಪೇಟೆಂಟ್ ಬೆಲ್ಟ್ ಡ್ರೆಸ್, ಪೆನ್ಸಿಲ್ ಕಟ್ ಜೀನ್ಸ್ ಜೊತೆಗೆ ಹೊಂದಿಕೆಯಾಗುವ ಆರ್ನಾಟ್ ಬಕಲ್ ಬೆಲ್ಟ್ ಡ್ರೆಸ್, ಬೂಟ್ ಕಟ್ ಮೇಲೆ ಹೊಂದಿಕೊಳ್ಳುವ ಬೊಗ್ ಬಕಲ್ ಬೆಲ್ಟ್ ಡ್ರೆಸ್ ಚಂದ. ದಪ್ಪ ಇರುವವರಿಗೆ ಡಬಲ್ ಬಕಲ್ ಬೆಲ್ಟ್ ಡ್ರೆಸ್ ಚೆನ್ನಾಗಿ ಕಾಣುತ್ತದೆ. ಸಣ್ಣಗೆ ಇರುವವರಿಗೆ ಮೈಗೆ ಅಂಟಿಕೊಂಡಿರುವ ಸ್ಕಿನ್ನಿ ಬೆಲ್ಟ್ ಡ್ರೆಸ್ ಬಳುಕುವ ಬಳ್ಳಿಯಂತಹ ನೋಟಕ್ಕೆ ಉತ್ತಮ ಆಯ್ಕೆ. ದಪ್ಪಗಿದ್ದು ಸಣ್ಣದಾಗಿ ಕಾಣಲು ಇಷ್ಟಪಡುವವರಿಗೆ ಲೂಪ್ ಲೇಯರ್, ಕೆವ್ ಬಕ್ಕಲ್ ಬೆಲ್ಟ್ ಡ್ರೆಸ್ ಉಡುಪು ಮಳಿಗೆಗಳಲ್ಲಿ ಸಿಗುತ್ತದೆ.

ಕಾಲೇಜು ಮತ್ತು ನಿತ್ಯ ಕಚೇರಿಗಳಿಗೆ ತೆರಳುವ ಮಹಿಳೆಯರಿಗೆ ಕ್ಯಾಶುವಲ್ ಬೆಲ್ಟ್ ಡ್ರೆಸ್ ಕಾಟನ್, ಲೆನಿನ್, ರೇಯಾನ್ ಬಟ್ಟೆಗಳಲ್ಲಿ ಸಿಗುತ್ತದೆ. ಋತುಮಾನಕ್ಕೆ ತಕ್ಕಂತೆ ಫ್ಯಾಬ್ರಿಕ್ ಬದಲಾವಣೆ ಮಾಡಿಕೊಳ್ಳಬಹುದು. ಧರಿಸಲು ಸಡಿಲವಾಗಿದ್ದು ನಿಮಗೊಂದು ಕಂಫರ್ಟಬಲ್ ಫೀಲ್ ಕೊಡುತ್ತದೆ. ಗಾಜಿನಂತೇ ನುಣುಪಾದ ಪೇಟೆಂಟ್ ಲೆದರ್‌ನಿಂದ ತಯಾರಾದ ಮತ್ತೊಂದು ಡ್ರೆಸ್ ಪೇಟೆಂಟ್ ಬೆಲ್ಟ್ ಡ್ರೆಸ್. ಮಿರರ್ ಫಿನಿಶಿಂಗ್ ಹೊಂದಿರುವ ಫಿಟ್‌ನೆಸ್ ತೋರ್ಪಡಿಸುವ ಈ ಡ್ರೆಸ್ ಧರಿಸಿದವರಿಗೆ ಆತ್ಮವಿಶ್ವಾಸ ಮೂಡಿಸುತ್ತದೆ. ಲೆದರ್ ಅಥವಾ ಸ್ಟೇನ್‌ಲೆಸ್ ಸ್ಟೀಲ್‌ನಿಂದ ತಯಾರಾದ ಸಾಲಿಡ್